ಕೊಡುವ ಪ್ರತಿ ಟನ್ ಕಬ್ಬಿನ ಬೆಲೆ ಏನು?

ಆ) ಸದರಿ ಗಿರಣಿಯ ಆಡಳಿತ ಮಂಡಳಿಯ ರೈತರ ಕಬ್ಬು ನುರಿಸುವಲ್ಲಿ ತಾರತಮ್ಯ ಧೋರಣೆಯನ್ನು ಅನುಸರಿಸುತ್ತಿರುವದು ಸರ್ಕಾರದ ಗಮನಕ್ಕೆ ಬಂದಿದೆಯೇ? ಹಾಗಿದ್ದರೆ ಈ ಬಗ್ಗೆ ಕೈಗೊಳ್ಳುವ ಕ್ರಮವೇನು?

ಇ) ಸದರಿ ಗಿರಣಿಯು ಪ್ರಾರಂಭವಾದಾಗಿನಿಂದ ಈವರೆಗೆ ಲಾಭ ನಷ್ಟದ ವಿವರ ನೀಡುವುದು (ಅಂಕಿ ಅಂಶದ ಸಹಿತ)

ಶ್ರೀ ಉಮೇಶ್ ವಿ.ಕತ್ತಿ (ಸಕ್ಕರೆ ಸಚಿವರು):-

ಅ) 1995-96ರ ಹಂಗಾಮಿನಲ್ಲಿ ಪ್ರತಿ ಟನ್ನಿಗೆ 500 ರೂ.ನಂತೆ ಮುಂಗಡವಾಗಿ ಬೆಲೆ ಪಾವತಿಸಿದೆ.

ಆ) ಇಲ್ಲ. ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಲಾಭ ಗಳಿಸಿರುವುದಿಲ್ಲ. ಕಾರ್ಖಾನೆಯು ಪ್ರಾರಂಭವಾದಾಗಿನಿಂದ ಅನುಭವಿಸಿದ ನಷ್ಟದ ವಿವರಗಳು ಈ ಕೆಳಗಿನಂತಿವೆ

1992-93	-	87.18 ಲಕ್ಷ ರೂ.
1993-94	-	17.31 ಲಕ್ಷ ರೂ.
1994-95	-	31.06 ಲಕ್ಷ ರೂ.

ದಿನಾಂಕ 31-3-95ಕ್ಕೆ ಅನುಭವಿಸಿದ ಕ್ರೋಢೀಕೃತ ನಷ್ಟ 135.55 ಲಕ್ಷ ರೂ.

ವಿಷಯ:- ಹಾವೇರಿ ಸಕ್ಕರೆ ಕಾರ್ಖಾನೆ ವ್ಯಾಪ್ತಿಯಲ್ಲಿ ಬೆಳೆದ ಕಬ್ಬಿನ ಪ್ರಮಾಣ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 496 (153)

ಶ್ರೀ ಯು.ಬಿ.ಬಣಕಾರ್ (ಹಿರೇಕೆರೂರು):- ಮಾನ್ಯ ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹಾವೇರಿ ಸಹಕಾರಿ ಸಕ್ಕರೆ ಕಾರ್ಖಾನೆಯ ವ್ಯಾಪ್ತಿಯಲ್ಲಿ ಬೆಳೆದ ಕಬ್ಬಿನ ಪ್ರಮಾಣ ಎಷ್ಟು?

ಆ) ಕಾರ್ಖಾನೆ ಪ್ರಾರಂಭವಾದಾಗಿನಿಂದ ದಿನಾಂಕ 15-6-96ರವರೆಗೆ ಎಷ್ಟು ದಿನ ಕಬ್ಬು ಅರೆದಿದೆ ಹಾಗೂ ಅರೆದ ಕಬ್ಬಿನ ಪ್ರಮಾಣ ಎಷ್ಟು?

ಶ್ರೀ ಉಮೇಶ್ ವಿ.ಕತ್ತಿ (ಸಕ್ಕರೆ ಸಚಿವರು):-

ಅ) 1995-96ನೇ ಸಾಲಿನಲ್ಲಿ ಹಾವೇರಿ ಸಹಕಾರಿ ಸಕ್ಕರೆ ಕಾರ್ಖಾನೆಯ ವ್ಯಾಪ್ತಿಯಲ್ಲಿ 3,11,000 ಮೆ.ಟನ್ ಕಬ್ಬು ಬೆಳೆಯಲಾಗಿದೆ.

ಅ) 1995-96ರ ಹಂಗಾಮನ್ನು ಕಾರ್ಖಾನೆಯು ದಿನಾಂಕ 9-12-95ರಂದು ಪ್ರಾರಂಭಿಸಿ ದಿನಾಂಕ 15-6-96ರವರೆಗೆ 189 ದಿವಸಗಳಲ್ಲಿ 2.46 ಲಕ್ಷ ಟನ್ ಕಬ್ಬನ್ನು ಅರೆದಿರುತ್ತದೆ.

ವಿಷಯ:- ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯದಲ್ಲಿಯ ಹಾಸ್ಟೆಲ್ ಸೂಪರಿಂಟೆಂಡೆಂಟ್ ಹುದ್ದೆಗಳ ನೇಮಕಾತಿ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 497 (665)

ಶ್ರೀ ಯು.ಬಿ.ಬಣಕಾರ್ (ಹಿರೇಕೆರೂರು):- ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯಗಳಲ್ಲಿ ಹಾಸ್ಟೆಲ್ ಸುಪರಿಂಟೆಂಡೆಂಟ್ 233 ಹುದ್ದೆಗಳಿಗೆ ದಿನಾಂಕ: 31-1-94ರಂದು ಅರ್ಜಿ ಕರೆದಿದ್ದು, ಇನ್ನುವರೆಗೆ ಆದೇಶ ಕೊಡದಿರಲು ಕಾರಣಗಳೇನು?

ಆ) ನೇಮಕಾತಿ ಆದೇಶ ಯಾವಾಗ ಕೊಡಲಾಗುವುದು?

ಶ್ರೀ ಕೆ.ಎಂ.ಕೃಷ್ಣರೆಡ್ಡಿ (ಸಮಾಜ ಕಲ್ಯಾಣ ಸಚಿವರು):-

ಅ) ಕರ್ನಾಟಕ ರಾಜ್ಯ ಪತ್ರ (ವಿಶೇಷ ಪತ್ರಿಕೆ) 31-3-94ರಲ್ಲಿ ಪ್ರಕಟಿಸಿದಂತೆ ಸಮಾಜ ಕಲ್ಯಾಣ ಇಲಾಖೆಯ ಸಾರ್ವಜನಿಕ ಬಾಲಕರ ವಿದ್ಯಾರ್ಥಿನಿಲಯದಲ್ಲಿ ಖಾಲಿ ಇರುವ 233 ಹಾಸ್ಟೆಲ್ ಮೇಲ್ವಿಚಾರಕರ ಹುದ್ದೆಗಳನ್ನು ಭರ್ತಿ ಮಾಡಲು ಅರ್ಜಿಗಳನ್ನು ಸ್ವೀಕರಿಸಿದ್ದು, ಅವುಗಳನ್ನು ಪರಿಶೀಲನೆ ಮಾಡಲಾಗಿದೆ. ಈ ಮಧ್ಯದಲ್ಲಿ ಸುಪ್ರಿಂ ಕೋರ್ಟ್ ಆದೇಶದ ಪ್ರಕಾರ ಮೀಸಲಾತಿ ಶೇಕಡಾ 50ಕ್ಕಿಂತ ಹೆಚ್ಚು ಮೀರಬಾರದೆಂದು ತೀರ್ಪು ನೀಡಿದ ಹಿನ್ನೆಲೆಯಲ್ಲಿ ಸರ್ಕಾರದ ಆದೇಶ ಸಂಖ್ಯೆ ಸಕಇ 394 ಬಿಸಿಎ 94 ದಿನಾಂಕ: 14-2-96ರಲ್ಲಿ ಕ್ರೀಮಿ ಲೇಯರ್ ನೀತಿಯನ್ನು ದಿನಾಂಕ: 1-1-94ರಿಂದ ಪೂರ್ವಾನ್ವಯ ಜಾರಿಗೆ ಬರುವಂತೆ ಆದೇಶಿಸಿದೆ. ಅಂದರೆ ಸರ್ಕಾರದ 1ನೇ ದರ್ಜೆ ಅಥವಾ 2ನೇ ದರ್ಜೆ ಗಜೆಟೆಡ್ ಅಧಿಕಾರಿಗಳಾಗಿ ಸೇವೆ ಸಲ್ಲಿಸುತ್ತಿರುವ ವೇತನ ಶ್ರೇಣಿ 2050ರಿಂದ 3950ರ ಮೇಲೆ ತಂದೆ ತಾಯಿ ಆದಾಯವನ್ನು ಪಡೆಯುತ್ತಿದ್ದರೆ, ಆದಾಯ ತೆರಿಗೆ ನಿರ್ಧರಣಕ್ಕೆ ಒಳಪಟ್ಟಿದ್ದರೆ ಮತ್ತು 8 ಹೆಕ್ಟೇರ್ ಮಳೆ ಆಧಾರಿತ ಅಥವಾ ತತ್ಸಮಾನ ಇತರೆ ಭೂಮಿಯನ್ನು ಹೊಂದಿದ್ದರೆ ಅಂತಹ ಅಭ್ಯರ್ಥಿಗಳು ಮೀಸಲಾತಿ ಸೌಲಭ್ಯ ಪಡೆಯಲು ಅರ್ಹರಾಗಿರುವುದಿಲ್ಲ. ಸರ್ಕಾರದ ಆದೇಶ ಹೊರಡಿಸಿದ ಹಿನ್ನೆಲೆಯಲ್ಲಿ ನೇಮಕಾತಿ ಪ್ರಕ್ರಿಯೆ ವಿಳಂಬಗೊಂಡಿರುತ್ತದೆ. ಆದುದರಿಂದ ಪುನಃ ಖಾಲಿ ಹುದ್ದೆಗಳನ್ನು ಪ್ರಕಟಿಸಿ, ಅರ್ಜಿಗಳನ್ನು ಆಹ್ವಾನಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಆ) ಮತ್ತೊಮ್ಮೆ ಹೊಸದಾಗಿ ಖಾಲಿ ಹುದ್ದೆಗಳನ್ನು ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಿಸಿ, ನೇಮಕಾತಿ ನಿಯಮದ ಪ್ರಕಾರ ನೇಮಕಾತಿ ಮಾಡಲು ಕ್ರಮ ಕೈಗೊಂಡ